International Journal of Kannada Research 2021; 7(2): 17-19




International Journal of Kannada Research
www.kannadajournal.com

**ISSN: 2454–5813**
IJKR 2021; 7(2): 17-19
© 2021 IJKR
www.kannadajournal.com
Received: 10-02-2021
Accepted: 12-03-2021

**Dr. Sanjeev R Nayak**
Assistant Professor, K.L.E. Society. S. G. H.College Haveri, Karnataka, India

**Corresponding Author:**
**Dr. Sanjeev R Nayak**
Assistant Professor, K.L.E. Society. S. G. H.College Haveri, Karnataka, India

# ಸಾಹಿತ್ಯದ ಸಮಾಕಾಲೀನ ಅಧ್ಯಯನದ ಅವಶ್ಯಕತೆ (ಕನ್ನಡ ಸಾಹಿತ್ಯ ಅನುಲಕ್ಷಿಸಿ)

**Dr. Sanjeev R Nayak**

ಸಾಹಿತ್ಯ ಸಮಾಜದ ಭಾಗವಾದರಿಂದ ಅದು ಜೀವನಕ್ಕೆ ಬೇಕಾದ ಎಲ್ಲಾ ಮೌಲ್ಯಗಳನ್ನು ಸೃಜನ ಶೀಲ ನೆಲೆಯಲ್ಲಿ ನಿರೂಪಿಸುತ್ತದೆ. ಸಹಜವಾಗಿ ಬದುಕಿನಲ್ಲಿ ಸಾಂಸ್ಕೃತಿಕವಾಗಿ ಅಡಕವಾಗಿರುವ ವಿವಿಧ ಸಂವೇದನೆಗಳು ಕ್ರಮಬದ್ದವಾಗಿ ಜೋಡಿಸಲು ಸಾಹಿತ್ಯದ ಸಮಕಾಲೀನ ಅಧ್ಯಯನ ಮುಖ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪ ವ್ಯಾಪ್ತಿ ವಿಶಾಲವಾದದು. ಕನ್ನಡದ ಮೊಟ್ಟ ಮೊದಲ ಉಪಲಬ್ದ ಅಲಂಕಾರ ಗ್ರಂಥವಾದ ಕವಿರಾಜ ಮಾರ್ಗ ಈ ಕನ್ನಡ ನಾಡು ನುಡಿ , ಸಾಹಿತ್ಯ, ಕಲೆ, ಸಂಸ್ಕೃತಿ ಕನ್ನಡದ ಹಿರಿಮೆ ಗರಿಮೆಗಳನ್ನು ಸಾರುತ್ತದೆ. ಈ ಕೃತಿಯಲ್ಲಿ ಕನ್ನಡ ನಾಡಿನ ಸಮಕಾಲೀನ ಚಿತ್ರಣ ಶೌರ್ಯ, ಸಾಹಸ , ಪ್ರೀತಿ, ಗೌರವ ಅಭಿಮಾನ ಜನಗಳ ಹೃದಯವಂತಿಕೆ ಮುಂತಾದವುಗಳನ್ನು ಮುಕ್ತಕಠದಿಂದ ಹೊಗುಳುವುದರ ಜೊತೆಗೆ ಅದಕ್ಕಿಂತ ಹಿಂದಿನ ಕಾಲದ ಸಾಹಿತ್ಯ ಕೃತಿಯ ಪರಂಪರೆಯನ್ನು ದಾಖಲಿಸುತ್ತದೆ. ಕವಿರಾಜ ಮಾರ್ಗದ ಕೃತಿಯ ನಂತರ ದೊರೆಯವದು ಮೊಟ್ಟ ಮೊದಲ ಗದ್ಯಕೃತಿ " ವಡ್ಡಾರಾಧನೆ". ಇದು ಹತ್ತೊಂಬತ್ತು ಕಥೆಗಳನ್ನು ಒಳಗೊಂಡ ಜೈನಧರ್ಮದ ಕೇವಲಿಗಳ ಕಥೆಗಳ ಸಾರವಾಗಿದೆ. ಆ ನಂತರ ನಮಗೆ ಕಾಣಿಸಿಕೊಳ್ಳುವ ಲಿಖಿತವಾದ ದಾಖಲೆಗಳೆಂದರೆ ಅದು ಒಂದು "ಆದಿಪುರಾಣ" ಇನ್ನೊಂದು "ವಿಕ್ರಮಾರ್ಜನ ವಿಜಯ" ಇವರೆಡು ಕೃತಿಗಳು ಕನ್ನಡ ಸಾಹಿತ್ಯದ ಮೊದಲ ಇತಿಹಾಸ ಕಾವ್ಯಗಳ ಮೇರು ಕೃತಿಗಳಾಗಿವೆ.

ಆ ನಂತರ ಆಧುನಿಕ ಕನ್ನಡ ಸಾಹಿತ್ಯದ ಮುಂಗೋಳಿ ಬಿ.ಎಂ.ಶ್ರೀಕಂಠಯ್ಯ ಕನ್ನಡ ಸಾಹಿತ್ಯ ಚರಿತ್ರೆ ಸಂಗ್ರಹ ದ "ಇ.ಪಿ.ರೈಸ್, "ಛಂದೋಂಬುಧಿ' "ಕನ್ನಡ –ಇಂಗ್ಲೀಷ್" ಮುನ್ನುಡಿಯ ರೆವಂಡ್.ಎಫ್.ಕಿಟಲ್ ಇವರು ಕನ್ನಡ ಸಾಹಿತ್ಯಕ್ಕೆ ವಿಶಿಷ್ಠವಾದ ಕೊಡುಗೆ ನೀಡಿದ್ದಾರೆ. ಕನ್ನಡ ಸಾಹಿತ್ಯದ ಮುಂದುವರೆದು ವಚನ ಸಾಹಿತ್ಯ ಪರಂಪರೆ, ದಾಸ ಸಾಹಿತ್ಯ ಪರಂಪರೆ, ಆಧುನಿಕ ಸಾಹಿತ್ಯ ಪರಂಪರೆಗಳು ನಿರ್ಮಾಣಗೊಂಡು ಇವುಗಳಿಂದ ಸಾಹಿತ್ಯ ಚರಿತ್ರೆಯ ಒಡಲೊಳಗೆ ಸಹಜವಾಗಿ ರಾಜಕೀಯ , ಧಾರ್ಮಿಕ, ಸಾಹಿತಿಕ, ಸಾಮಾಜಿಕ, ಸಾಂಸ್ಕೃತಿಕ ಚರಿತ್ರೆಯ ಐತಿಹಾಸಿಕ ಚರಿತ್ರೆಯ ಮಹತ್ವದ ಹಿನ್ನೋಟ ಮುನ್ನೋಟಗಳನ್ನು ನಿರ್ಮಿಸಿಕೊಂಡು ಕನ್ನಡ ನಾಡಿನ ಸಂಸ್ಕೃತಿಯ ಹೆಮ್ಮೆಯ ಬೆಳವಣಿಗಿಗೆ ಪೂರಕ ಪ್ರೇರಕವಾಗಿ ಕನ್ನಡ ಸಾಹಿತ್ಯ ಬೆಳದಿದೆ.

## ಕನ್ನಡ ಸಾಹಿತ್ಯದ ಉದ್ದೇಶ ಪ್ರಯೋಜನ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕರ್ನಾಟಕ ಸಂಸ್ಕೃತಿಯ ವೈವಿಧ್ಯತೆಯಗಳಲ್ಲಿ ಒಂದು. ಹಾಗಾಗಿ ಸಾಹಿತ್ಯ ಮೌಲ್ಯ ಪ್ರತಿಪಾದನೆಗಳಿಗಿಂತ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ನಾಡಿನ ಕಲೆ ಮತ್ತು ಧರ್ಮಗಳ ಬೆಸುಗೆಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯ ಮತಧರ್ಮಗಳು ಕೂಡಿ ನಿರ್ಮಾಣವಾಗಿರುವದರಿಂದ ಅಯಾಕಾಲದ ಸಾಮಾಜಿಕ ಸಾಂಸ್ಕೃತಿಕ ಇತಿಹಾಸವನ್ನು ಅರಿತುಕೊಳ್ಳಲು ಸಾಹಿತ್ಯ ಚರಿತ್ರೆಯು ಮುಖ್ಯ ಅಕರವಾಗಿದೆ. ಈ ನಿಟ್ಟಿನಲ್ಲಿ ಕನ್ನಡ ಶಾಸನ ಪ್ರಧಾನ ಪಾತ್ರವಹಿಸುತ್ತದೆ. ಇವುಗಳಿಂದ ವ್ಯಕ್ತಗೊಂಡಿರುವ ಜನಜೀವನದ ಯತ್ತವತ್ತಾದ ಚಿತ್ರಣಗಳ ನಾಡಿನ ಸಾಮಾಜಿಕ ಸಾಂಸ್ಕೃತಿಕ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಭಕ್ತಿಯುಗದ ಪರಂಪರೆಯಲ್ಲಿ ಸಮಾನತೆ, ಕಾಯಕ, ನಿಷ್ಠೆ, ದಾಸೋಹ, ಸಹಪಂಕ್ತಿಭೋಜನ, ಅಸಂಗ್ರಹತತ್ವ, ಭಕ್ತಿಮನೋಭಾವ, ಉತ್ಸಾಹ, ಆವೇಶ, ಹರಿದಾಸರ ವೈಷ್ಣವ ಭಕ್ತಿ, ಸಾಮಾಜಿಕ ಸುಧಾರಣೆ, ವೈಜ್ಞಾನಿಕ ದೃಷ್ಠಿಯಿಂದ ಕೂಡಿದ ವಿಚಾರ ಕ್ರಾಂತಿಗಳು ಸ್ವತಂತ್ರ ವಿಚಾರಶೀಲತೆ, ಪ್ರಯೋಗ ನಿಷ್ಠೆ, ನಾಡಿನ ಹೊಸ ಆಯಾಮಗಳ ನೆಲೆಗಳಿಗೆ

ಹೊಂದಿಕೊಂಡು ಹೋಗುವ ಅಕ್ಷಯ ನಿಧಿಯಾಗಿದೆ. ಆಧುನಿಕರಣದ ಸಂದರ್ಭದಲ್ಲಿ ಬದುಕಿನಲ್ಲಿ ಸಾಂಸ್ಕೃತಿಕವಾಗಿ ಅಡಕವಾಗಿರುವ ವಿವಿಧ ಸಂವೇದನೆಗಳು ಕ್ರಮಬದ್ಧವಾಗಿ ಜೋಡಿಸಲು ಸಾಹಿತ್ಯದ ಸಮಕಾಲೀನ ಅಧ್ಯಯನ ಮುಖ್ಯವಾಗಿರುತ್ತದೆ.

ಸಾಹಿತ್ಯ ವಾಹಿನಿ ಸಮಾಜ ಸಂಸ್ಕೃತಿ ಭಾಗವಾದ್ದರಿಂದ ಅದು ಬದುಕಿನ ಗಂಭೀರವಾದ ಕೊಡುಗೆಯಾಗಿದೆ. ಅದು ಜೀವನಕ್ಕೆ ಬೇಕಾದ ಎಲ್ಲಾ ಮೌಲ್ಯಗಳನ್ನು ಅನುಭವ ಸಂಪತ್ತಿನಿಂದ ಸೃಜನಶೀಲ ನೆಲೆಯಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತಿಸಿ ನಿರೂಪಿಸುತ್ತದೆ, ಪ್ರತಿಪಾದಿಸುತ್ತದೆ, ಹಾಗಾಗಿ ಸಹಜವಾಗಿ ಬದುಕಿನಲ್ಲಿ ಸಾಂಸ್ಕೃತಿಕವಾಗಿ ಅಡಕವಾಗಿರುವ ಧರ್ಮ, ಪುರಾಣ, ನೀತಿ, ಶಿಲ್ಪ, ನೃತ್ಯ, ಚಿತ್ರಕಲೆ, ತತ್ವಶಾಸ್ತ್ರ, ಮನಶಾಸ್ತ್ರ, ಇತಿಹಾಸ, ವಿಜ್ಞಾನ, ಭಾಷಾಶಾಸ್ತ್ರ, ಮುಂತಾದ ಅಂತರ್–ಶಿಸ್ತಿನ ವಿವಿಧ ಸಂವೇದನೆಗಳನ್ನು ಮೂಲತಃ ಸಾಹಿತ್ಯ ಅಂತರ್ಗತ ಮಾಡಿಕೊಂಡಿರುತ್ತದೆ.ಈ ಈ ಹಿನ್ನಲೆಯಲ್ಲಿ ಸಾಹಿತ್ಯದ ಸಮಕಾಲೀನ ಅಧ್ಯಯನ ಮುಖ್ಯವಾಗಿರುತ್ತದೆ.

ಸಾಹಿತ್ಯದ ಸಮಕಾಲೀನ ಅಧ್ಯಯನ ಮೂಲಕ ಮಹಾಕಾವ್ಯ, ಖಂಡಕಾವ್ಯ, ಪ್ರಭಂಧ, ಸಣ್ಣಕಥೆ, ಪ್ರವಾಸ ಸಾಹಿತ್ಯ , ಜೀವನ ಚರಿತ್ರೆ, ವ್ಯಕ್ತಿ ಚಿತ್ರ, ಸಿನೇಮಾ, ಸಂಗೀತ, ನಾಟಕ ಸಾಹಿತ್ಯ ರಚನೆ, ಸಂಭಾಷಣೆ, ಕೀರ್ತನೆ ಇತ್ಯಾದಿಗಳ ಮೂಲಕ ಜೀವಾನುಭವ ದೊರೆಯತ್ತದೆ.

ಸಾಹಿತ್ಯದ ಸಮಕಾಲೀನ ಅಧ್ಯಯನ ಮೂಲಕ ಒಂದು ಸಮಾಜದಲ್ಲಿ ಬದುಕುತ್ತಿರುವ ಸಾಹಿತಿ ಆಯಾ ಸಮಾಜದ ಒಂದು ಭಾಗವೇ ಆಗಿದ್ದು ಅಲ್ಲಿನ ಜನರ ಮಾನಸಿಕ ಸಾಮಾಜಿಕ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಆತನ ಅನುಭವದ ಪ್ರತ್ಯೇಕ ಅನುಭವಗಳಾಗುತ್ತದೆ.ಆ ಅನುಭವ ನಮ್ಮದಾಗಿರುತ್ತದೆ.

**ಸಮಕಾಲೀನ ಸಾಹಿತ್ಯ ಮತ್ತು ಧರ್ಮ**

ಸಾಹಿತ್ಯ ಮತ್ತು ಧರ್ಮಗಳ ನಡುವೆ ಅವಿನಾಭಾವ ಸಂಭಂಧವಿದೆ. ಸಾಹಿತ್ಯ ಮೂಲಕ ಧರ್ಮ ಪ್ರಚಾರಗೊಂಡು ಜನಪ್ರಿಯತೆ ಪಡೆದರೆ ಧರ್ಮವನ್ನು ಕೇಂದ್ರವಾಗಿರಿಸಿಕೊಂಡು ರಚಿಸಲ್ಪಟ ಸಾಹಿತ್ಯ ಕೂಡ ಕನ್ನಡ ಜನಪ್ರೀಯತೆಯನ್ನು ವೃದ್ದಿಸಿಕೊಂಡಿದೆ.

**ಸಮಕಾಲೀನ ಸಾಹಿತ್ಯ ಮತ್ತು ವಿಜ್ಞಾನ**

ಸಾಹಿತ್ಯ ಮತ್ತು ವಿಜ್ಞಾನಗಳರೆಡು ವೈರುಧ್ಯ ದಿಕ್ಕಿನ ಪರಿಕಲ್ಪನೆಗಳು ಮತ್ತು ಕ್ಷೇತ್ರಗಳು. ವಿಜ್ಞಾನ ವಾಸ್ತವಕ್ಕೆ ಬದ್ದವಾಗಿದ್ದರೆ ಸಾಹಿತ್ಯ ಕಲ್ಪನೆ ಬದ್ದವಾದದ್ದು.. ವಿಜ್ಞಾನ ಹೂವಿನ ಬೆಳವಣಿಗೆಯನ್ನು ವೈಜ್ಞಾನಿಕ ಹಂತದಲ್ಲಿ ನೋಡಿದರೆ ಸಾಹಿತ್ಯ ಅದರ ಸೌಂದರ್ಯವನ್ನು ಭಾವನಾತ್ಮಾಕ ದೃಷ್ಟಿಕೋನದಲ್ಲಿ ವಿಶ್ಲೇಷಿಸುತ್ತದೆ. ವಿಜ್ಞಾನದ ಪ್ರಯೋಗ ನಿಷ್ಠವಾದರೆ ಸಾಹಿತ್ಯ ಅನುಭವ ಸ್ವಾದವಾಗಿರುತ್ತದೆ. ವಿಜ್ಞಾನದಲ್ಲಿ ಯಾವದೇ ನಂಬಿಕೆ ಜಾಗ ಇರುವದಿಲ್ಲ ಸಾಕ್ಷಿ ಹುಡುಕತ್ತದೆ. ಸಾಹಿತ್ಯ ನಂಬಿಕೆಯನ್ನು ಅವಲಂಬಿಸಿದೆ. ವಿಜ್ಞಾನ ಕಾರಣ ಹುಡುಕಾಡಿದರೆ ಸಾಹಿತ್ಯ ಭಾವನೆಗಳನ್ನು ಹುಡುಕಾಡುವದು. ಸಾಹಿತ್ಯ ಮತ್ತು ವಿಜ್ಞಾನಗಳೆರಡು ವಿಭಿನ್ನ ಪರಿಕಲ್ಪನೆಗಳಾದರೂ ಸಾಹಿತ್ಯ ಇಲ್ಲದಿದ್ದರೆ ವಿಜ್ಞಾನ ಅಪೂರ್ಣವೆಂದು ಮಾಥೂಆರ್ನಾಲ್ಡ್ ಹೇಳುತ್ತಾನೆ.

**ಕನ್ನಡ ಸಾಹಿತ್ಯದ ಪ್ರಸ್ತುತತೆ**

ಕನ್ನಡ ಸಂಸ್ಕೃತಿಯ ವಿಶ್ವಪ್ರಜ್ಞೆಯ ಭಾಗವಾಗಿರುವದರಿಂದ ಕನ್ನಡ ಸಾಹಿತ್ಯ ಕಾಲತೀತಾವಾದ ನಡುಗೆಯಾಗಿದೆ. ಮಾನವನ ಬದುಕಿನ ಅನನ್ಯತೆಗಳನ್ನು ಜೀವನ ಮೌಲ್ಯಗಳನ್ನು ಹಿಡಿದಿಡುತ್ತದೆ. ಕಳೆದು ಹೋದ ನಂಬಿಕೆ ಆಚರಣೆ ಬದುಕಿನ ಬದ್ದತೆಗಳನ್ನು ಪ್ರತಿಪಾದಿಸುತ್ತದೆ. ಇಂದಿಗೂ ರಾಮಯಣ, ಮಹಾಭಾರತಗಳು ಆಯಾಕಾಲದ ಜೀವನ ಕಥೆ, ವ್ಯಥೆ, ಜೀವನ ವೈವಿಧ್ಯತೆಗಳನ್ನು ಕಣ್ಣುಮುಂದೆ ಕಟ್ಟಿಕೊಡುತ್ತವೆ. ಹಾಗೇಯೆ ಆ ಕಾಲದ ಧರ್ಮ ಪ್ರಚಾರದ ಸಂಘರ್ಷದಲ್ಲಿ ಹುಟ್ಟಿಕೊಂಡ ಚಂಪೂ ಸಾಹಿತ್ಯ , ವಚನ ಸಾಹಿತ್ಯ, ರಗಳೆ, ಷಟ್ಪದಿ ಸಾಹಿತ್ಯ ದಾಸ ಸಾಹಿತ್ಯ, ವಿಜಯನಗರ ಪ್ರೌಢ ದೇವರಾಯ ಕಾಲದ ಸಾಹಿತ್ಯ ಮೈಸೂರು ರಾಜರ ಒಡೆಯರ ಕಾಲದ ಸಾಹಿತ್ಯಗಳ ಚಿಂತನೆಯ ಹಿನ್ನಲೆಯಲ್ಲಿ ಆ ಕಾಲದ ಬದುಕಿನ ಸಮಗ್ರ ಹಿನ್ನೋಟ–ಮನ್ನೋಟಗಳ ಪ್ರತಿಪಾದನೆಗಳನ್ನು ಪ್ರತಿಬಿಂಬಿಸುತ್ತದೆ. ಇವತ್ತು ಆ ಕಾಲದ ಜೀವನ ಮೌಲ್ಯಗಳು ಆ ಕಾಲದ ಸಾಹಿತ್ಯದ ಮೂಲಕ ಪ್ರಸ್ತುತದ ಮಾದರಿಗಳಾಗಿ ನಮ್ಮ ನಡುವೆ ಜೀವಂತವಾಗಿ ನಿರಂತರತೆಯನ್ನು ಸಾಧಿಸಿಕೊಂಡಿವೆ. ಕಾಲ ಕಳೆದು ಹೋದರೂ ಆ ಕಾಲದ ಕಥೆ–ವ್ಯಥೆಗಳು, ಜೀವನ ಮೌಲ್ಯಗಳು ಪ್ರಸ್ತುತ ಬದುಕಿನ ಮೌಲ್ಯಗಳನ್ನು ಕಟ್ಟುತ್ತಲೇ ಹೋಗುತ್ತೇವೆ. ಇದೇ ಸಾಹಿತ್ಯದ ನಿರಂತರತೆ. ಅದಕ್ಕೆ ಕೊನೆಯಿಲ್ಲ. ಸಾವಿಲ್ಲ. ಆಯಾಕಾಲದ ಪ್ರೇರಣೆ ಪ್ರಭಾವ ಪರಿಣಾಮಗಳನ್ನು ಸಾಹಿತ್ಯದ ವಸ್ತು ವಿಷಯಗಳನ್ನಾಗಿ ಮಾಡಿಕೊಂಡು ಅಭಿವ್ಯಕ್ತಿಸುತ್ತದೆ. ಆ ಮೂಲಕ ಸಮಾಜ, ಸಂಸ್ಕೃತಿ, ನಾಗರಿಕಥೆಗೊಂದು ಪರಿವರ್ತನೆಯ ಆಯಾಮಗಳನ್ನು ನಿದೃಷ್ಠವಾದ ಕಾಲಘಟ್ಟದಲ್ಲಿ ಕಟ್ಟಿಕೊಡುತ್ತದೆ. ಡಾ.ಜಿ.ಎಸ್.ಶಿವರುದ್ರಪ್ಪನವರು ಅಭಿಪ್ರಾಯಪಡುವಂತೆ " ಸಾಹಿತ್ಯ ಅಂದಂದಿನ ಜನಜೀವನ ಯಾವ ದಿಕ್ಕಿನಲ್ಲಿ ಸಾಗುತ್ತಿದೆ"? ಅದರ ಚಲನೆ ಹೇಗಿದೆ? ಕೇವಲ ಸಂಪ್ರದಾಯವೋ? ಅಥವಾ ಪ್ರಗತಿಪರವೋ? ಎಂಬ ಮನೋವ್ಯಾಪಾರಗಳ ವಿವರಗಳನ್ನು ಅಂದಂದಿನ ಜನಜೀವನದ ಸಾಮಾಜಿಕ, ನಾಗರಿಕ, ಸಾಂಸ್ಕೃತಿಕ ಅವ್ಯಸ್ಥೆಗಳಾವವು ಎಂಬುದನ್ನು ಅವಕಾಶ ಮಾಡಿಕೊಡುತ್ತದೆ. ಜಾಗತಿ ಮಟ್ಟದಲ್ಲಿ ಸಾಹಿತ್ಯ ಜಗತ್ತು ಜನಗಳಲ್ಲಿ ಕ್ರಾಂತಿಯ ಕಿಚ್ಚು ಹಚ್ಚಿರುವದನ್ನು ಮರೆಯವ ಹಾಗಿಲ್ಲ.

ಭಾರತೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕನ್ನಡ ನವೋದಯ ಸಾಹಿತ್ಯ, ಪ್ರಗತಿ ಶೀಲ ಸಾಹಿತ್ಯ ಚಳವಳಿಗಳು ಅಷ್ಟೇ ಪ್ರಮಾಣದ ಮಹತ್ವದ ಪಾತ್ರವಹಿಸಿವೆ. ಇದೇ ಸಂದರ್ಭದಲ್ಲಿ ಈ ಕಾಲದ ಸಾಹಿತ್ಯ ಚಳುವಳಿಗಳು ಹಿಂದೂ ಧರ್ಮದ ಪರಂಪರೆಯ ಉಳಿವಿನ ದೃಷ್ಟಿಯಿಂದ ಹಲವು ಧೋರಣೆಗಳನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದವು. ಹಾಗೇಯೆ ಅದೇ ಸಂದರ್ಭದಲ್ಲಿ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಸಾಮಾಜಿಕ ಸಮ್ಯಸೆಗಳಿಗೆ ಒತ್ತುಕೊಟ್ಟು ಹಸಿವು, ಬಡತನ, ನಿರದ್ಯೋಗ, ಕಾರ್ಮಿಕರ, ರೈತರ, ಮಹಿಳೆಯರ ಸಮ್ಯಸೆಗಳಿಗೆ ಮೂಲ ಕಾರಣವಾದ ಮನುಷ್ಯ ಮಾನಸಿಕ ಲೋಕದ ಕಡೆಗೆ ಒತ್ತು ನೀಡಿತು. ಮನುಷ್ಯನ ಸಣ್ಣತನ, ಅಸೂಯೆ, ದ್ವೇಷಕಾಮ, ಪ್ರೀತಿ, ಪ್ರೇಮ, ಪ್ರಬಾವತಂತ್ರದ, ಅಸ್ತಿತ್ವವಾದದ ಕಡೆಗೆ ಗಮನಹರಿಸಿತ್ತು. ಒಟ್ಟಾರೆ ವ್ಯಕ್ತಿಯೆಂಬ ಮತ್ತು ಸಮಾಜದ ವ್ಯಕ್ತಿತ್ವದ ಶೋಧನೆಯೆ ಕಡೆಗೆ ವಾಲಿಕೊಂಡಿತು. ಈ ನವ್ಯ ಸಾಹಿತ್ಯ ಚಳುವಳಿಯ ಸ್ವಾತಂತ್ರೋತ್ತರ ಭಾರತದ ಸಮ್ಯಸೆಗಳಿಗೆ ಮೂಲಕಾರಣವಾದ ಮುನುಷ್ಯನ ಮಾನಸಿಕ ಲೋಕದ ಕಡೆಗೆ ಗಮನಹರಿಸಿತ್ತು. ಮುನುಷ್ಯನ ಸಣ್ಣತನ ಅಸೂಯೆ , ದ್ವೇಷ,ಕಾಮ –ಪ್ರೀತಿ–ಪ್ರೇಮ ಪ್ರಭಾವತಂತ್ರದ , ಅಸ್ತಿತ್ವವಾದದ ಕಡೆಗೆ ಗಮನಹರಿಸಿತ್ತು. ಈ ನವ್ಯ ಸಾಹಿತ್ಯ ಚಳುವಳಿಯ ಧೋರಣೆಗಳನ್ನು ವಿರೋಧಿಸಿ ಬಂದ ದಲಿತ ಬಂಡಾಯ ಸಾಹಿತ್ಯ ಚಳುವಳಿಗಳು ದೇಶದಲ್ಲಾದ ರಾಜಕೀಯ ಬದಲಾವಣೆಯ ಪ್ರಕ್ರಿಯೆಗಳಿಂದಾಗಿ ಆ ಸೌಲಭ್ಯಗಳ ಅನುಕೂಲತೆಗಳು ಪಡೆದುಕೊಂಡು ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯನ್ನು ಬಳಸಿಕೊಂಡು ಜಾಗೃವಾದವು. ಎಲ್ಲಾ ಶೋಷಿತ ಸಮುದಾಯಗಳು ಪ್ರಜ್ಞಾವಂತರಾಗ ತೊಡಗಿದರು. ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಈ ಶೋಷಿತರು ತಾವೇ ಕಲಿತ

ಅಕ್ಷರಗಳ ಮೂಲಕ ತಮ್ಮ ಬದುಕಿನ ಅನುಭವಗಳನ್ನು ತಾವೇ ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿ ತೊಡಗಿದರು. ಎಂದೂ ಕಂಡರಿಯದ ವಿವಿಧ ಸಮುದಾಯಗಳ ಹೊಸ ಸಂವೇದನೆಗಳು ಒಮ್ಮಲೇ ಕನ್ನಡ ಸಾಹಿತ್ಯ ವಾಹಿನಿಯಲ್ಲಿ ಹರಿಯತೊಡಗಿದ್ದವು. ಸಂವೇದನೆಗಳ ಹೊಸ ಅನುಭವಗಳನ್ನು ಅಭಿವ್ಯಕ್ತಿಸಿ ರೊಮಾಂಚನವನ್ನು ಉಂಟುಮಾಡಿದ್ದವು. ಇವತ್ತು ಮಹಿಳ ಪರ ಸಾಹಿತ್ಯ ಚಳುವಳಿಯನ್ನು ತನ್ನ ಪ್ರತ್ಯೇಕತೆಗಾಗಿ ಹಂಬಲಿಸುವ ಮೂಲಕ ತನ್ನ ಅನುಭವದ ಅಭಿವ್ಯಕ್ತಿಯನ್ನು ಪ್ರತಿಪಾದಿಸುತ್ತದೆ.

**ಕನ್ನಡತನ**

ಕನ್ನಡ ಭಾಷಾಭಿಮಮಾನ ಕೇವಲ ಭಾಷಿಕ ನೆಲೆಯಲ್ಲಿ ಇದ್ದರೆ ಸಾಲದು ಅದು ಕನ್ನಡತನವಾಗಿ ಹೊರಹೊಮ್ಮ ಬೇಕು. ಕನ್ನಡ ಪರಂಪರೆಯನ್ನು ಬೆಳೆಸಿದ ಸಾವಿರಾರು ವರ್ಷಗಳ ವಿವಿಧ ವ್ಯಕ್ತಿತ್ವಗಳ ಜೊತೆಗೆ ಸ್ವಾತಂತ್ರೋತ್ತರ ಕಾಲಘಟ್ಟದಲ್ಲಿ ಕನ್ನಡವನ್ನು ದನಿಯಾಗಿಸಿದೆ. ಕನ್ನಡದ ಚಿಂತನಕಾರರು ಹಾಗೂ ಕನ್ನಡ ಚಳವಳಿಗಾರರನ್ನು ಇಡಿಯಾಗಿ ನೆನೆಯಬೇಕು. ಆಧುನಿಕ ಸಂದರ್ಭದಲ್ಲಿ ಅವರು ಆರಂಭಿಸಿದ ಕೆಲಸವನ್ನು ನೆನೆಯತ್ತಲೇ ಸಮಕಾಲೀನ ಸಂದರ್ಭಕ್ಕೆ ತಕ್ಕುದಾದ, ದೂರಗಾಮಿಯಾದ ಕನ್ನಡಾಭಿಮಾನ ಕ್ಲೀಷೆಯಾಗಬಾರದು. ಕ್ರೀಯಾಶೀಲತೆ ಮತ್ತು ಚಿಂತನೆ ಶೀಲತೆಗಳು ಒಂದಾದ ತತ್ವವಾಗಬೇಕು. ಉದ್ಯೋಗದ ವಿಷಯಕ್ಕೆ ಬಂದರೆ, ಕನ್ನಡ ಮಾಧ್ಯಮದವರಿಗೆ ಸರ್ಕಾರಿ ಉದ್ಯೋಗದಲ್ಲಿ ವಿಶೇಷ ಅವಕಾಶ ಲಭ್ಯವಾಗುವದು ಮಾತ್ರವಲ್ಲ, ಈ ಸೌಲಭ್ಯ ಖಾಸಗಿ ಸಂಸ್ಥೆಗಳಲ್ಲೂ ಸಿಗುವಂತಾಗಬೇಕು. ಬಹುಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳು ಕನ್ನಡಿಗರಿಗೆ ಆದ್ಯತೆಯ ಮೇಲೆ ಉದ್ಯೋಗ ಕೊಡುವಂತೆ ಮಾಡಬೇಕು.

**ಆಡಳಿತದಲ್ಲಿ ಕನ್ನಡ**

ಆಡಳಿತದಲ್ಲಿ ಕನ್ನಡ ಬಳಕೆ ಎನ್ನುವದು ಪ್ರಜಾಪ್ರಭುತ್ವ ಮತ್ತು ಪಾರದರ್ಶಕತೆಯ ಒಂದು ಸಿದ್ಧಾಂತ. ಕನ್ನಡ ಮಾಧ್ಯಮದಲ್ಲಿ ಓದಿ ಎಂದು ಹೇಳಿದರಷ್ಟೇ ಸಾಲದು ಎಂಬಂತಯೇ ಆಡಳಿತದಲ್ಲಿ ಕನ್ನಡ ಬಳಸಿ ಎಂದು ಹೇಳಿದರಷ್ಟೇ ಸಾಲದು ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಆತ್ಮವಿಶ್ವಾಸ ಮೂಡಿಸುವ ಕ್ರಮಗಳು ಬೇಕು. ಅದೇ ರೀತಿ ಆಡಳಿತದಲ್ಲಿ ಕನ್ನಡವನ್ನು ಬಳಸಲು ಕಟ್ಟು ನಿಟ್ಟಿನ ಕ್ರಮಗಳು ಬೇಕು. ಅಷ್ಟೇ ಅಲ್ಲದೇ ಅಂದಂದಿನ ಸಂದರ್ಭಕ್ಕೆ ತಕ್ಕಂತೆ ಕನ್ನಡವನ್ನು ಸಜ್ಜುಗೊಳಿಸಬೇಕು. ಇಂದಿನ ಗಣಕ ಯಂತ್ರ ಯಗದಲ್ಲಿ ಇಂಗ್ಲೀಷನಷ್ಟೆ ಸಮರ್ಥವಾಗಿ ಕಂಪ್ಯೂಟರ್‌ನಲ್ಲಿ ಕನ್ನಡವನ್ನು ಬಳಸಲು ಬೇಕಾದ ತಾಂತ್ರಿಕ ಪರಿಣತಿಯನ್ನು ಸಂಶೋಧಿಸಿ ಅಳವಡಿಸಿ ಇಂಗ್ಲೀಷಗಿಂತ ಹಿಂದೆ ಇಲ್ಲವೇಂದು ಸಾಧಿಸುವ ಕೆಲಸವನ್ನು ಸಂಘ– ಸಂಸ್ಥೆಗಳು ಸರ್ಕಾರ ಮತ್ತು ಕನ್ನಡ ಅಭಿವೃದ್ದಿ ಪ್ರಾಧಿಕಾರಗಳು ಮಾಡಬೇಕು

ಮಾಹಿತಿ ತಂತ್ರಜ್ಞಾನ ಪ್ರಚಾರ ಹೆಚ್ಚಾದಂತೆ ಶಿಕ್ಷಣ , ಆಡಳಿತ .ಸಂಸ್ಕೃತಿ, ಭಾಷೆ, ಎಲ್ಲ ಕ್ಷೇತ್ರಗಳ ಮೇಲೂ ವಿಭನ್ನ ಪರಿಣಾಮವಾಗತೊಡಗಿದೆ. ಕಂಪ್ಯೂಟರ್ ಎಂದರೆ ಇಂಗ್ಲೀಷ ಇಂಗ್ಲೀಷ ಎಂದರೆ ಕಂಪ್ಯೂಟರ್ ಎಂಬ ಭ್ರಮೆ ಮೂಢಿಸಿದೆ. ಕನ್ನಡವನ್ನು ಕಂಪ್ಯೂಟರ್ ಬಳಕೆಗಾಗಿ ಸಜ್ಜುಗೊಳಿಸುವ ಕೆಲಸ ಆಗಬೇಕು. ಈ ಮೂಲಕ ಕನ್ನಡವನ್ನು ಸಮಕಾಲೀನ ಅಗತ್ಯಗಳಿಗೆ ಸಮವಾಗಿ ಸ್ಪಂದಿಸುವಂತೆ ಮಾಡಬೇಕು.

**ಆಧಾರ ಗ್ರಂಥ**

1. ಕನ್ನಡ ಪ್ರಜ್ಞೆ {ಲೇ} ಪ್ರೊ. ಬರಗೂರು ರಾಮಚಂದ್ರಪ್ಪ
2. ಕನ್ನಡ ಜಗತ್ತು ಅರ್ಧಶತಮಾನ – {ಲೇ} ಪ್ರೊ.

ಕೆ.ವಿ.ನಾರಯಣ